ಶ್ರೀ ಸಿ.ಟಿ. ರವಿ: ಕೆಲವು ಪ್ರಶ್ನೆಗಳಿಗೆ ಪ್ರಶ್ನೆ ಕೇಳಿದ ಅವಧಿಯಲ್ಲಿ ಉತ್ತರ ಇಲ್ಲ. ಕೆಲವು ಪ್ರಶ್ನೆಗಳಿಗೆ ಶಾಶ್ವತವಾಗಿ ಉತ್ತರವಿಲ್ಲ.

ಅಧ್ಯಕ್ಷರು: ಆಯಾಯ ದಿವಸವೇ ಲೇ ಆಗುವುದಕ್ಕಿಂತ ಮೊದಲೇ ಕೊಡಬೇಕು. ಸುಮ್ಮಸುಮ್ಮನೆ ಲೇಟಾಗಿ ಬಂದಿದೆ ಅಂದರೆ ಹೇಗೆ? ಸರಿಯಾಗಿ ಕೊಡಿಸುತ್ತೇನೆ. ಆಯಾಯ ದಿನಗಳಲ್ಲೇ ಕೊಡಬೇಕು. ಸುಮ್ಮನೆ ಮಾರನೇದಿನ ಕೊಡುತ್ತೇವೆಂದು ಅರ್ಥವೇನು? ಉತ್ತರಗಳನ್ನು ಕೊಡಿಸುತ್ತೇನೆ, ಐದನೇ ತಾರೀಖಿನೊಳಗೆ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಕೊಡಿಸುತ್ತೇನೆ.

ಮಾನ್ಯ ಸದಸ್ಯರು: ಸದನದಲ್ಲಿ ಮಂಡಿಸಿದ್ದೇವೆಂದು ಹೇಳುತ್ತಾರೆ, ಉತ್ತರವೆಲ್ಲಿ ಸ್ವಾಮಿ?

ಶ್ರೀ ಬಿ.ಎಸ್. ಯಡಿಯೂರಪ್ಪ: ಆಯಾಯ ದಿನ ಯಾವುದು ಇಲ್ಲಿ ಚರ್ಚೆಯಾಗುತ್ತದೆ, ಆ ಪ್ರಶ್ನೆಗಳಿಗೆ ಉತ್ತರ ಬಂದಿದೆ; ಲಿಖಿತ ಮೂಲಕ ಕೊಡಬೇಕು.

ಅಧ್ಯಕ್ಷರು: ಲಿಖಿತ ಮೂಲಕಕ್ಕೆ ಆಯಾಯ ದಿವಸವೇ ಕೊಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಆವತ್ತಾವತ್ತೇ ಕೊಡಬೇಕು. ಈಗ ಬ್ಯಾಲೆನ್ಸ್ ಇರುವುದನ್ನೆಲ್ಲಾ ನಾಳೆ ಬರುವಂತೆ ಮಾಡಿಸಿ. ಆಯಾಯ ದಿವಸವೇ ಅದನ್ನು ಕೊಡುವಂತೆ ಮಾಡಬೇಕು.

ಅಧ್ಯಕ್ಷರು: ಅದಕ್ಕೋಸ್ಕರ ನಾನು ಈಗ instruction 'ಕೊಟ್ಟಿದ್ದೇನೆ ನಮ್ಮ staff ಗೆ, ನಾಳೆಯಿಂದ ಆಯಾಯ ದಿವಸವೇ ಅದನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೇನೆ. ಈಗ ಸದನವನ್ನು ನಾಳೆ ಬೆಳಿಗ್ಗೆ ಹತ್ತು ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ರಾತ್ರಿ 7 ಗಂಟೆ 10 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 19ನೇ ಜುಲೈ 2005ರ ಮಂಗಳವಾರದಂದು ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ-I

4769(5661) ಶ್ರೀ ಅಂಗಾರ ಎಸ್.(ಸುಳ್ಯ): ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಈ ಕಾರ್ಮಿಕರಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳೇನು:

ಇ) ಸರ್ಕಾರದ ಸವಲತ್ತುಗಳನ್ನು ಪಡೆದುಕೊಂಡಿರುವ ಕಾರ್ಮಿಕ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1,69,362 ಬೀಡಿ ಕಾರ್ಮಿಕರಿದ್ದಾರೆ. ತಾಲ್ಲೂಕುವಾರು ಮಾಹಿತಿ ಕೆಳಕಂಡಂತಿದೆ.

1) ಮಂಗಳೂರು – 1,00,823
2) ಬಂಟ್ವಾಳ – 39,176
3) ಪುತ್ತೂರು/ಸುಳ್ಯ – 20,254
4) ಬೆಳ್ತಂಗಡಿ – 9,109

ಆ) ಬೀಡಿ ಕಾರ್ಮಿಕರ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರವು ಯಾವುದೇ ಯೋಜನೆಗಳನ್ನು ಹಮ್ಮಿಕೊಂಡಿರುವುದಿಲ್ಲ. ರಾಜ್ಯ ಸರ್ಕಾರ ಬೀಡಿ ಕಾರ್ಮಿಕರಿಗೆ ನಿಗದಿಪಡಿಸಿರುವ ಕನಿಷ್ಠ ವೇತನ ಸೇರಿದಂತೆ ಬೋನಸ್, ಮಹಿಳಾ ಬೀಡಿ ಕಾರ್ಮಿಕರಿಗೆ ಹೆರಿಗೆ ಭತ್ಯೆ, ರಾಷ್ಟ್ರೀಯ ಮತ್ತು ಹಬ್ಬದ ರಜೆ ಸೌಲಭ್ಯಗಳನ್ನು ಪಡೆಯುತ್ತಾರೆ. ಇದಲ್ಲದೆ ಕೇಂದ್ರ ಸರ್ಕಾರವು ಬೀಡಿ ಕಾರ್ಮಿಕರಿಗಾಗಿ ಆರೋಗ್ಯ, ಶೈಕ್ಷಣಿಕ, ವಸತಿ, ಯೋಜನೆಗಳಡಿ ಜಾರಿ ಮಾಡಿದ್ದು, ಸದರಿ ಸೌಲಭ್ಯಗಳನ್ನು ಬೀಡಿ ಕಾರ್ಮಿಕರು ಪಡೆಯುತ್ತಿದ್ದಾರೆ.

ಇ) ಸವಲತ್ತು ಪಡೆದುಕೊಂಡ ಕಾರ್ಮಿಕರ ಸಂಖ್ಯೆ:–

1)ಆರೋಗ್ಯ – 1,46,648

2)ವಸತಿ – 362 (ಈಗ ಈ ಸ್ಕೀಂನ್ನು ಪರಿಷ್ಕರಿಸಲಾಗಿದ್ದು, ಜಿಲ್ಲಾಧಿಕಾರಿಗಳ ಮೂಲಕ ಕಾರ್ಯರೂಪಕ್ಕೆ ತರಲಾಗುತ್ತಿದೆ)

3) ವಿದ್ಯಾಭ್ಯಾಸ–2004–05ನೇ ಹಣಕಾಸಿನ ಸಾಲಿಗೆ 28,313 ವಾರ್ಡನ ಬೀಡಿ ಕಾರ್ಮಿಕರಿಗೆ ವಿದ್ಯಾಭ್ಯಾಸದ ಸೌಲಭ್ಯಕ್ಕಾಗಿ ಹಣಕಾಸಿನ ಸೌಲಭ್ಯವನ್ನು ಮಂಜೂರು ಮಾಡಲಾಗಿದೆ.

4770(5663) ಶ್ರೀ ಎಸ್. ಅಂಗಾರ (ಸುಳ್ಯ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸುಳ್ಯ ತಾಲ್ಲೂಕಿನಲ್ಲಿ ಅಧಿಕೃತ ಹಾಗೂ ಅನಧಿಕೃತವಾಗಿ ತೆರೆದಿರುವ ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು; (ಗ್ರಾಮವಾರು, ಅಂಗಡಿವಾರು ಮಾಹಿತಿ ನೀಡುವುದು);

ಆ) ಅನಧಿಕೃತ ಸಾರಾಯಿ ಅಂಗಡಿಗಳನ್ನು ತೆರವುಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೆ?